ಸಾಕ್ಷಿಯನ್ನು ದಿಃ **02.07.2024** ರಂದು ಕರೆಯಿಸಿ ಪ್ರಮಾಣವಚನ ಭೋದಿಸಲಾಯಿತು.

ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಈ.ಬಿ.ಆರ್.ವಕೀಲರಿಂದಃ-

ನಾನು ಈ ದಾವೆಯಲ್ಲಿ ವಾದಿಯಿದ್ದು ನನ್ನ ಮುಖ್ಯ ವಿಚಾರಣೆಯನ್ನು ಪ್ರಮಾಣ ಪತ್ರದ ಮೂಲಕ ಸಲ್ಲಿಸಿದ್ದು ಅದರಲ್ಲಿ ಹೇಳಿರುವ ಸಂಗತಿಗಳೆಲ್ಲ ಸತ್ಯವಾಗಿದ್ದು ಸಹಿ ಮಾಡಿದ್ದೇನೆ. ದೊಡ್ಡಹುಣಸೂರು ಗ್ರಾಮದ ಸರ್ವೇ ನಂ. 374ರ ಪಹಣಿಯನ್ನು ನಿಪಿ-1 ಎಂದು, ದಿನಾಂಕ 29.01.2019ರ ನೊಂದಾಯಿತ ಮೂಲ ಕ್ರಯದ ಕರಾರನ್ನು ನಿಪಿ-2 ಎಂದು, ನಿಪಿ-2ಕ್ಕೆ 2 ರಿಂದ 6, 9 ಮತ್ತು 10ನೇ ಪ್ರತಿವಾದಿಯರು ಮತ್ತು ನಾನು ಸಹಿ ಹಾಕಿದ್ದು, ಸದರಿ ಸಹಿಗಳನ್ನು ನಿಪಿ-2(ಎ) ರಿಂದ ನಿಪಿ-2(ಹಚ್) ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 1ನೇ ಪ್ರತಿವಾದಿಯು ಹೆಬ್ಬೆಟ್ಟಿನ ಗುರುತನ್ನು ಹಾಕಿದ್ದಾರೆ. ದಿನಾಂಕ 29.01.2021ರಂದು ನನ್ನ ವಕೀಲರ ಮೂಲಕ ನೀಡಿದ ನೊಟೀಸನ ಕಚೇರಿ ಪ್ರತಿಯನ್ನು ನಿಪಿ-3 ಎಂದು, ಸದರಿ ನೊಟೀಸನ್ನು ಕಳುಹಿಸಿದ ಬಗ್ಗೆ 9 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ನಿಪಿ-4 ರಿಂದ 12 ಎಂದು, ಒಂದು ಅಂಚೆ ಸ್ವೀಕೃತಿ ಪತ್ರವನ್ನು ಹಾಜರುಪಡಿಸಿದ್ದು ನಿಪಿ-13 ಎಂದು, 8 ವಾಪಸ್ಸಾದ ಅಂಚೆ ಕವರನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ-14 ರಿಂದ 21 ಎಂದು, ಸದರಿ ಕವರಗಳನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಒಳಗೆ ಇರುವ ನೊಟೀಸಗಳನ್ನು ನಿಪಿ-14(ಎ) ರಿಂದ 21(ಎ) ಎಂದು, ದಿನಾಂಕ 20.01.2023ರಂದು ನೀಡಿದ ಇನ್ನೊಂದು ನೊಟೀಸನ ಕಚೇರಿ ಪ್ರತಿಯನ್ನು ಹಾಜರು ಪಡಿಸಿದ್ದು ನಿಪಿ-22 ಎಂದು, ಸದರಿ ನೊಟೀಸ ಕಳುಹಿಸಿದ ಬಗ್ಗೆ 10 ಅಂಚೆ ರಶೀದಿಗಳನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ-23 ರಿಂದ 32 ಎಂದು, ಒಟ್ಟು 9 ಅಂಚೆ ಸ್ವೀಕೃತಿ ಪತ್ರಗಳನ್ನು ಹಾಜರುಪಡಿಸಿದ್ದು ಕ್ರಮವಾಗಿ ನಿಪಿ-33 ರಿಂದ 41 ಎಂದು, ಒಂದು ವಾಪಸ್ಸಾದ ಅಂಚೆ ಕವರನುನ ಹಾಜರುಪಡಿಸಿದ್ದು ನಿಪಿ-42 ಎಂದು, ಸದರಿ ಅಂಚೆ ಕವರನ್ನು ತೆರೆದ ನ್ಯಾಯಾಲಯದಲ್ಲಿ ತೆರೆದು ಒಳಗೆ ಇರುವ ನೊಟೀಸನ್ನು ನಿಪಿ-42(ಎ) ಎಂದು, ದಿನಾಂಕ 01.02.2023ರಂದು ನೀಡಿದ ಪ್ರತ್ಯುತ್ತರ ನೊಟೀಸನ್ನು ನಿಪಿ-43 ಎಂದು, ನನ್ನ ಬ್ಯಾಂಕ

ಖಾತೆಗೆ ಸಂಬಂಧಿಸಿದ ಎರಡು ಸ್ಟೇಟಮೆಂಟಗಳನ್ನು ಹಾಜರುಪಡಿಸಿದ್ದು ನಿಪಿ-44 ಮತ್ತು 45 ಎಂದು, ದಿನಾಂಕ 20.03.2021ರಂದು ಬರೆದ ಮುಂದುವರೆದ ಕ್ರಯದ ಕರಾರು ಪತ್ರವನ್ನು ನಿಪಿ-46 ಎಂದು ಗುರುತಿಸಲಾಯಿತು. ಸದರಿ ದಾಖಲೆಗೆ 2 ಮತ್ತು 6ನೇ ಪ್ರತಿವಾದಿಯರು ಮತ್ತು ನಾನು ಸಹಿ ಹಾಕಿದ್ದೇವೆ. ಸದರಿ ಸಹಿಗಳನ್ನು ನಿಪಿ-46(ಎ) ಯಿಂದ ನಿಪಿ-46(ಸಿ) ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ **3** ರಿಂದ **5** ನೇ ಪ್ರತಿವಾದಿಗಳ ಪರ ಶ್ರೀ ಎಸ್.ಎಲ್.ಜಿ. ವಕೀಲರಿಂದಃ

ವಕೀಲರು ಗೈರು ಹಾಜರಿದ್ದು, 3ನೇ ಪ್ರತಿವಾದಿ ಹಾಜರಿದ್ದು ಕಾಲಾವಕಾಶ ಕೋರಿದ್ದು ನೀಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇದೆ.,

(ಅನಿತ)
ಹೆಚ್ಚುವರಿ ಹಿರಿಯ ಸಿವಿಲ್ ಜಡ್ಜ್
ಮತ್ತು ಜೆ.ಎಂ.ಎಫ್.ಸಿ., ಹುಣಸೂರು.